All India Radio: Bangalore
National Bulletin In Kannada
02.05.2026 19.35 hrs
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

- ಉತ್ಪಾದನಾ ಸಾಮರ್ಥ್ಯ ಹೆಚ್ಚಳ, ಸ್ಥಿತಿಸ್ಥಾಪಕತ್ವ ನಿರ್ಮಾಣ, ಕೇಂದ್ರ ಸರ್ಕಾರದ ಪ್ರಮುಖ ಆದ್ಯತೆ ಸಚಿವ ಜೆ.ಪಿ.ನಡ್ಡಾ
- ಪ್ರಸಕ್ತ ತಿಂಗಳಲ್ಲಿ ಬಿಸಿಗಾಳಿಯಿಂದ ಜನರು ಆತಂಕಪಡುವ ಅಗತ್ಯವಿಲ್ಲ; ಎಚ್ಚರವಹಿಸುವುದು ಮುಖ್ಯ- ಕೇಂದ್ರ ಸಚಿವ ಡಾ.ಜಿತೇಂದ್ರ ಸಿಂಗ್
- ಪ್ರಸಾರ ಭಾರತಿ ನೂತನ ಅಧ್ಯಕ್ಷರಾಗಿ ಸಂವಹನ ತಜ್ಞ ಪ್ರಸೂನ್ ಜೋಶಿ ನೇಮಕ
- ಐಸಿಸಿ ಮಹಿಳಾ ಟಿ-೨೦ ವಿಶ್ವಕಪ್ ಕ್ರಿಕೆಟ್ ೨೦೨೬ಕ್ಕೆ ಬಿಸಿಸಿಐ ನಿಂದ ಭಾರತೀಯ ತಂಡ ಪ್ರಕಟ

<>><><*><><<>

ಗುಜರಾತ್‌ನ ಸೂರತ್‌ನಲ್ಲಿಂದು ಸಂಪನ್ನಗೊಂಡ 'ವೈಬ್ರೆಂಟ್ ಗುಜರಾತ್ ಪ್ರಾದೇಶಿಕ ಶೃಂಗಸಭೆ'ಯಲ್ಲಿ ಮೂರು ಲಕ್ಷದ ೫೩ ಸಾವಿರ ಕೋಟಿ ರೂಪಾಯಿಗಳಿಗೂ ಹೆಚ್ಚು ಮೊತ್ತದ ದಾಖಲೆಯ ೨ ಸಾವಿರದ ೭೬೨ ಒಡಂಬಡಿಕೆಗಳಿಗೆ ಸಹಿ ಹಾಕಲಾಗಿದೆ. ಸಮಾರೋಪ ಅಧಿವೇಶನವನ್ನುದ್ದೇಶಿಸಿ ಮಾತನಾಡಿದ ಕೇಂದ್ರ ಸಚಿವ ಜೆ.ಪಿ.ನಡ್ಡಾ, ಭಾರತ, ಜಾಗತಿಕ ಪೂರೈಕೆ ಸರಪಳಿ ಅಡಚಣೆಗಳನ್ನು ಅವಕಾಶಗಳಾಗಿ ಪರಿವರ್ತಿಸಬೇಕಾಗಿದೆ ಮತ್ತು ಸ್ವಾವಲಂಬಿ ಉತ್ಪಾದನಾ ಕೇಂದ್ರವಾಗಿ ಹೊರಹೊಮ್ಮಬೇಕು. ಸ್ಥಿತಿಸ್ಥಾಪಕತ್ವವನ್ನು ನಿರ್ಮಿಸುವುದು ಮತ್ತು ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವುದು ದೇಶದ ಪ್ರಮುಖ ಆದ್ಯತೆಗಳಲ್ಲಿ ಒಂದಾಗಿದೆ ಎಂದು ಪ್ರತಿಪಾದಿಸಿದರು. ವೈಂಬ್ರಟ್ ಗುಜರಾತ್‌ನಂತಹ ಪ್ರಾದೇಶಿಕ ಶೃಂಗಸಭೆಗಳು, ವಿಕಸಿತ ಭಾರತದ ದೃಷ್ಟಿಕೋನವನ್ನು ಸಾಧಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದು ಸಚಿವರು ಹೇಳಿದರು. ಗುಜರಾತ್ ಉಪಮುಖ್ಯಮಂತ್ರಿ ಹರ್ಷ ಸಾಂಘ್ವಿ ಮಾತನಾಡಿ, ಶೃಂಗಸಭೆಯಲ್ಲಿ ಸಹಿ ಹಾಕಲಾದ ಒಪ್ಪಂದಗಳು ಮುಂದಿನ ಮೂರು ವರ್ಷಗಳಲ್ಲಿ ೨ ಲಕ್ಷ ೮೨ ಸಾವಿರಕ್ಕೂ ಹೆಚ್ಚು ಯುವಕರಿಗೆ ನೇರ ಉದ್ಯೋಗವನ್ನು ಸೃಷ್ಟಿಸುವ ನಿರೀಕ್ಷೆಯಿದೆ ಎಂದು ತಿಳಿಸಿದರು.

<>><><*><><<>

ಪ್ರಸಕ್ತ ಮೇ ತಿಂಗಳಲ್ಲಿ ಎದುರಾಗಬಹುದಾದ ಬಿಸಿಗಾಳಿ ವಾತಾವರಣದ ಬಗ್ಗೆ ಜನರು ಆತಂಕಪಡುವ ಅಗತ್ಯವಿಲ್ಲ ಎಂದು ಕೇಂದ್ರ ಭೂ ವಿಜ್ಞಾನಗಳ ಖಾತೆ ಸಚಿವ ಡಾ.ಜಿತೇಂದ್ರ ಸಿಂಗ್ ಹೇಳಿದ್ದಾರೆ. ದೆಹಲಿಯಲ್ಲಿಂದು ಈ ಕುರಿತು ಮಾಧ್ಯಮಗಳಿಗೆ ಮಾಹಿತಿ ನೀಡಿದ ಅವರು, ಕೆಲವು ಪ್ರದೇಶಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ತಾಪಮಾನ ಮತ್ತು ಬಿಸಿಗಾಳಿ ವಾತಾವರಣ ಇರಬಹುದಾದರೂ, ದೇಶಾದ್ಯಂತ ಇವು ಏಕರೂಪವಾಗಿರುವುದಿಲ್ಲ. ಸಮಯೋಚಿತ ಸಿದ್ಧತೆ ಮತ್ತು ಭಾರತೀಯ ಹವಾಮಾನ ಇಲಾಖೆ ಹೊರಡಿಸಿದ ಸಲಹೆ-ಸೂಚನೆಗಳನ್ನು ಅನುಸರಿಸುವ ಮೂಲಕ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಬಹುದಾಗಿದೆ ಎಂದು ತಿಳಿಸಿದರು. ಮೇ ಎರಡನೇ ಮತ್ತು ನಾಲ್ಕನೇ ವಾರಗಳಲ್ಲಿ ತುಲನಾತ್ಮಕವಾಗಿ ಹೆಚ್ಚಿನ ತಾಪಮಾನವನ್ನು ನಿರೀಕ್ಷಿಸಲಾಗಿದೆ. ಇದು ವಾಯುವ್ಯ, ಮಧ್ಯ ಮತ್ತು ಪಶ್ಚಿಮ ಭಾರತದ ಕೆಲವು ಭಾಗಗಳಲ್ಲಿ ಹಾಗೂ ಪೂರ್ವ ಕರಾವಳಿಯಲ್ಲಿ ಬಿಸಿಗಾಳಿಯ ವಾತಾವರಣವಿರುವ ಸಾಧ್ಯತೆಯಿದೆ. ಆದರೂ, ಮೊದಲ ಮತ್ತು ಮೂರನೇ ವಾರದಲ್ಲಿ ದೇಶದ ಹೆಚ್ಚಿನ ಭಾಗಗಳಲ್ಲಿ ಮಳೆ ಮತ್ತು ಗುಡುಗು ಸಹಿತ ಮಳೆಯಿಂದಾಗಿ ಸಾಮಾನ್ಯದಿಂದ ಸಾಮಾನ್ಯಕ್ಕಿಂತ ಕಡಿಮೆ ತಾಪಮಾನವಿರುವ ಸಾಧ್ಯತೆಯಿದೆ. ಕರಾವಳಿ ಮತ್ತು ನಗರ ಪ್ರದೇಶಗಳಲ್ಲಿ ತೀವ್ರ ಶೆಖೆಯಿಂದ ರಾತ್ರಿ ವೇಳೆ, ತಾಪಮಾಣ ಹೆಚ್ಚಾಗುವ ಸಾಧ್ಯತೆಯಿದೆ ಎಂದು ಅವರು ಹೇಳಿದ್ದಾರೆ. ಸೆಖೆ ಸಂಬಂಧಿತ ಸವಾಲುಗಳನ್ನು ನಿಭಾಯಿಸಲು ಸರ್ಕಾರ ಸಂಪೂರ್ಣ ಸಜ್ಜಾಗಿದೆ. ರಾಜ್ಯ ಮತ್ತು ಜಿಲ್ಲಾಮಟ್ಟಗಳಲ್ಲಿ ಇದಕ್ಕೆ ಸಮನ್ವಯ ಕಾರ್ಯಗಳು ಅಗತ್ಯವಾಗಿವೆ. ಜನರು ದೇಹವನ್ನು ನಿರ್ಜಲೀಕರಣವಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು ಹಾಗೂ ಹಗಲಿನ ವೇಳೆ ಹೆಚ್ಚು ಹೊತ್ತು ಹೊರಗೆ ಕಳೆಯಬಾರದು ಎಂದು ಸಚಿವ ಡಾ.ಜಿತೇಂದ್ರ ಸಿಂಗ್ ತಿಳಿಸಿದ್ದಾರೆ.

<>><><*><><<>

ಬುದ್ಧ ಪೂರ್ಣಿಮೆಯ ಸಂದರ್ಭದಲ್ಲಿ ನಿನ್ನೆ ಲೇಹ್‌ನಲ್ಲಿ 'ತಥಾಗತ ಪವಿತ್ರ ಕುರುಹುಗಳ ಪ್ರದರ್ಶನ' ಉದ್ಘಾಟನೆಗೊಂಡಿರುವುದು ತುಂಬ ಸಂತಸದ ವಿಷಯ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. 'ಈ ಪವಿತ್ರ ಕುರುಹುಗಳು ಕಪಿಲವಸ್ತುವಿನ ಪಿಪ್ರಾಹ್ವಾ ಸ್ತೂಪಕ್ಕೆ ಸಂಬಂಧಿಸಿವೆ ಮತ್ತು ೧೯ ಶತಮಾನದ ಕೊನೆಯ ವರ್ಷಗಳಲ್ಲಿ ಉತ್ಖನನ ಮಾಡಲಾಗಿದೆ' ಎಂದು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಪ್ರಧಾನಿ ಹೇಳಿದ್ದಾರೆ. ಪವಿತ್ರ ಕುರುಹುಗಳು, ಭಗವಾನ್ ಬುದ್ಧರ ಬೋಧನೆಗಳನ್ನು ಸಾಕಾರಗೊಳಿಸುತ್ತವೆ. ಪ್ರದರ್ಶನವು ಲಡಾಖ್‌ನಲ್ಲಿ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಪ್ರವಾಸೋದ್ಯಮವನ್ನು ಉತ್ತೇಜಿಸಲಿದೆ ಎಂದು ಅವರು ತಿಳಿಸಿದ್ದಾರೆ. ಈ ಪ್ರದರ್ಶನ, ಇದೇ ೧೪ ರವರೆಗೆ ನಡೆಯಲಿದೆ.

<>><><*><><<>

ನೌಕಾಪಡೆ ಮುಖ್ಯಸ್ಥ ಅಡ್ಮಿರಲ್ ದಿನೇಶ್ ಕುಮಾರ್ ತ್ರಿಪಾಠಿ ಇಂದಿನಿಂದ ನಾಲ್ಕು ದಿನಗಳ ಮ್ಯಾನ್ಮಾರ್ ಭೇಟಿ ಆರಂಭಿಸಿದ್ದಾರೆ. ಈ ಭೇಟಿಯ ಸಮಯದಲ್ಲಿ ಅಡ್ಮಿರಲ್ ತ್ರಿಪಾಠಿ ಅವರು, ಮ್ಯಾನ್ಮಾರ್‌ನ ಕಮಾಂಡರ್-ಇನ್-ಚೀಫ್ ಜನರಲ್ ಯೆ ವಿನ್ ಊ, ಮ್ಯಾನ್ಮಾರ್ ರಕ್ಷಣಾ ಸಚಿವ ಜನರಲ್ ಯು ಹ್ತುನ್ ಆಂಗ್ ಮತ್ತು ಮ್ಯಾನ್ಮಾರ್ ಸಶಸ್ತ್ರ ಪಡೆಗಳ ಇತರ ಹಿರಿಯ ಅಧಿಕಾರಿಗಳೊಂದಿಗೆ ದ್ವಿಪಕ್ಷೀಯ ಚರ್ಚೆಗಳನ್ನು ನಡೆಸಲಿದ್ದಾರೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಸದ್ಯ ಪ್ರಗತಿಯಲ್ಲಿರುವ ದ್ವಿಪಕ್ಷೀಯ ಸಾಗರ ಸಹಕಾರ, ಎರಡೂ ದೇಶಗಳ ನೌಕಾಪಡೆಗಳ ನಡುವಿನ ಸಹಭಾಗಿತ್ವ ಹೆಚ್ಚಳ ಕುರಿತಂತೆ ಮಾತುಕತೆಗಳ ವೇಳೆ ಪರಿಶೀಲಿಸಲಾಗುವುದು. ಈ ಭೇಟಿಯು, ಪರಸ್ಪರ ಗೌರವ, ವಿಶ್ವಾಸ ಮತ್ತು ಹಿಂದೂ ಮಹಾಸಾಗರ ಪ್ರದೇಶದಲ್ಲಿ ಕಡಲ ಭದ್ರತೆ ಮತ್ತು ಸ್ಥಿರತೆಗಾಗಿ ಉಭಯ ದೇಶಗಳ ಬದ್ಧತೆಯ ಮೇಲೆ ಆಧಾರಿತವಾದ ದೀರ್ಘಕಾಲೀನ ಸ್ನೇಹವನ್ನು ಪ್ರತಿಬಿಂಬಿಸುತ್ತದೆ.

<>><><*><><<>

ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಕಾರ್ಯದರ್ಶಿ ಚಂಚಲ್ ಕುಮಾರ್ ಅವರು, ಪಾಟ್ನಾದಲ್ಲಿಂದು ಬಿಹಾರ ಮತ್ತು ಜಾರ್ಖಂಡ್‌ನ ವಿವಿಧ ಮಾಧ್ಯಮ ಘಟಕಗಳೊಂದಿಗೆ ಪರಿಶೀಲನಾ ಸಭೆ ನಡೆಸಿದರು. ಸಭೆಯಲ್ಲಿ ಕೇಂದ್ರ ವಾರ್ತಾ ಬ್ಯೂರೋ, ಕೇಂದ್ರ ಸಂವಹನ ಬ್ಯೂರೋ, ಆಕಾಶವಾಣಿ ಮತ್ತು ದೂರದರ್ಶನದ ಅಧಿಕಾರಿಗಳು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಮಾತನಾಡಿದ ಚಂಚಲ್ ಕುಮಾರ್, ಎಲ್ಲಾ ಮಾಧ್ಯಮ ಘಟಕಗಳು ಉತ್ತಮ ಸಮನ್ವಯದಿಂದ ಕೆಲಸ ಮಾಡಬೇಕು. ಎಲ್ಲಾ ಮಾಧ್ಯಮ ಘಟಕಗಳು ಡಿಜಿಟಲ್ ಮಾಧ್ಯಮ ತಂತ್ರಜ್ಞಾನವನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸಿಕೊಳ್ಳುವುದರ ಮೂಲಕ ತಮ್ಮ ಸಾಮರ್ಥ್ಯಗಳನ್ನು ಹೆಚ್ಚಿಸಿಕೊಳ್ಳಬೇಕು ಎಂದು ಅವರು ಕರೆ ನೀಡಿದರು.

<>><><*><><<>

ಭಾರತದ ಸಾರ್ವಜನಿಕ ಸೇವಾ ಪ್ರಸಾರ ಸಂಸ್ಥೆ, ಪ್ರಸಾರ ಭಾರತಿಯ ನೂತನ ಅಧ್ಯಕ್ಷರಾಗಿ ಸಂವಹನ ತಜ್ಞ ಪ್ರಸೂನ್ ಜೋಶಿ ಅವರನ್ನು ವಾರ್ತಾ ಮತ್ತು ಪ್ರಸಾರ ಸಚಿವಾಲಯ ನೇಮಿಸಿದೆ. ಪ್ರಸೂನ್ ಜೋಶಿ ಅವರು, ಚಲನಚಿತ್ರ ಸಾಹಿತ್ಯ, ಕಥೆ ಹೇಳುವಿಕೆ, ಜಾಹೀರಾತು ಅಭಿಯಾನಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್ ಅವರು, ಪ್ರಸೂನ್ ಜೋಶಿ ಅವರ ನೇಮಕವನ್ನು ಸ್ವಾಗತಿಸಿದ್ದು, ಜೋಶಿ ಅವರು ಜಾಹೀರಾತು, ಸಾಹಿತ್ಯ, ಕಲೆ ಮತ್ತು ಸಿನಿಮಾ ವಲಯದಲ್ಲಿ ತಮ್ಮ ಸೃಜನಶೀಲತೆ ತೋರಿದ್ದಾರೆ. ಅವರ ನುಡಿಗಳು ಮಣ್ಣಿನ ಸೊಗಡು ಹೊರಹೊಮ್ಮುತ್ತವೆ ಮತ್ತು ಅವರ ದೃಷ್ಟಿಕೋನ ದೇಶದ ಸಂಸ್ಕೃತಿಯ ಸಾರವನ್ನು ಪ್ರತಿಬಿಂಬಿಸುತ್ತದೆ ಎಂದು ಹೇಳಿದ್ದಾರೆ. ಪ್ರಸೂನ್ ಜೋಶಿ ಅವರ ನೇತೃತ್ವದಲ್ಲಿ ಪ್ರಸಾರ ಭಾರತಿ,

ಹೊಸ ಚೈತನ್ಯ, ಗಾಢವಾದ ಉದ್ದೇಶ, ಮತ್ತು ಹೊಸ ಸೃಜನಶೀಲ ಧ್ವನಿಯನ್ನು ಅಳವಡಿಸಿಕೊಳ್ಳಲಿದೆ ಎಂದು ಸಚಿವರು ತಿಳಿಸಿದ್ದಾರೆ.

ಜೋಶಿ ಅವರು ಈ ಹಿಂದೆ ಮುಂಬೈನ ಕೇಂದ್ರ ಚಲನಚಿತ್ರ ಪ್ರಮಾಣೀಕರಣ ಮಂಡಳಿ-ಸಿಬಿಎಫ್‌ಸಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

<>><><*><><<>

ನ್ಯೂಯಾರ್ಕ್‌ನಲ್ಲಿ ಇದೇ ೪ ರಿಂದ ೮ ರವರೆಗೆ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಆಶ್ರಯದಲ್ಲಿ ನಡೆಯಲಿರುವ ಎರಡನೇ ಅಂತಾರಾಷ್ಟ್ರೀಯ ವಲಸೆ ಪರಿಶೀಲನಾ ವೇದಿಕೆ-ಐಎಮ್‌ಆರ್‌ಎಫ್ ಸಭೆಗೆ ಭಾರತೀಯ ನಿಯೋಗದ ನೇತೃತ್ವವನ್ನು ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವ ಕೀರ್ತಿ ವರ್ಧನ್ ಸಿಂಗ್ ವಹಿಸಲಿದ್ದಾರೆ. ಐಎಮ್‌ಆರ್‌ಎಫ್ ನ ಪೂರ್ಣಾಧಿವೇಶನದಲ್ಲಿ ಸಚಿವರು, ಭಾರತದ ಹೇಳಿಕೆಯನ್ನು ಓದಲಿದ್ದಾರೆ. ವಲಸೆ ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳ ಮೇಲೆ ಜಾಗತಿಕ ಪರಿಣಾಮ ಕುರಿತು ಚರ್ಚಿಸಲು ಐಎಮ್‌ಆರ್‌ಎಫ್ ಅಂತರ ಸರ್ಕಾರಿ ಜಾಗತಿಕ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತಿದೆ. ಸಭೆಯು, ನೀತಿ ಚರ್ಚೆ ಮತ್ತು ಪೂರ್ಣಾಧಿವೇಶನ ಒಳಗೊಂಡಿರುತ್ತದೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ. ೨೦೨೨ ರಲ್ಲಿ ನಡೆದ ಮೊದಲ ಐಎಂಆರ್‌ಎಫ್ ಸಭೆಯ ಮುಂದುವರಿದ ಭಾಗವಾಗಿ ಎರಡನೇ ಸಭೆಯನ್ನು ಆಯೋಜಿಸಲಾಗಿದೆ.

<>><><*><><<>

ಪಶ್ಚಿಮ ಏಷ್ಯಾದಲ್ಲಿ ಉದ್ವಿಗ್ನತೆ ಮುಂದುವರಿದಿದೆ. ದಕ್ಷಿಣ ಲೆಬನಾನ್‌ನಲ್ಲಿ ಕದನ ವಿರಾಮಕ್ಕೆ ಪ್ರಮುಖ್ಯತೆ ಇಲ್ಲವಾಗಿದ್ದು, ಅಮೆರಿಕ ಮತ್ತು ಇರಾನ್ ನಡುವಿನ ರಾಜತಾಂತ್ರಿಕ ಸಂಬಂಧಗಳು ಸಹ ಒತ್ತಡದಲ್ಲಿವೆ. ಇದರಿಂದ ಈ ಪ್ರದೇಶದಲ್ಲಿ ಅನಿಶ್ಚಿತತೆ ಹೆಚ್ಚಾಗಿದೆ. ನಬಾತಿಹ್ ಜಿಲ್ಲೆಯಲ್ಲಿ ಇಸ್ರೇಲ್ ಅನೇಕ ದಾಳಿಗಳನ್ನು ನಡೆಸಿದೆ ಎಂದು ಲೆಬನಾನ್ ಅಧಿಕಾರಿಗಳು ತಿಳಿಸಿದ್ದಾರೆ. ಇವುಗಳಲ್ಲಿ ಕ್ಫರ್ ದಜ್ಜಲ್ ಬಳಿ ವಾಹನಗಳನ್ನು ಗುರಿಯಾಗಿಸಿಕೊಂಡು ಡ್ರೋನ್ ದಾಳಿಗಳು ಮತ್ತು ಕ್ಫರ್ ದಜ್ಜಲ್ ಮತ್ತು ಅಡ್ಚಿತ್ ಅನ್ನು ಸಂಪರ್ಕಿಸುವ ರಸ್ತೆಗಳು ಸೇರಿವೆ. ಇತ್ತೀಚಿನ ದಿನಗಳಲ್ಲಿ ರಕ್ಷಣಾ ಕಾರ್ಯಕರ್ತರು ಸೇರಿದಂತೆ ನಾಗರಿಕರ ಸಾವುನೋವುಗಳು ಸಹ ವರದಿಯಾಗಿವೆ. ಸ್ವಯಂ ಘೋಷಿತ ಬಫರ್ ವಲಯವನ್ನು ಮೀರಿ ಕಾರ್ಯನಿರ್ವಹಿಸುತ್ತಿರುವ ಹೆಜ್ಬೊಲ್ಲಾದ ನೆಲೆಗಳನ್ನು ತಟಸ್ಥಗೊಳಿಸುವ ಗುರಿಯನ್ನು ಈ ದಾಳಿಗಳು ಹೊಂದಿವೆ ಎಂದು ಇಸ್ರೇಲ್ ಸಮರ್ಥಿಸಿಕೊಂಡಿದೆ. ಇದಕ್ಕೆ ಪ್ರತಿಕ್ರಿಯೆಯಾಗಿ, ಹೆಜ್ಬೊಲ್ಲಾ ಸೀಮಿತ ರಾಕೆಟ್ ಮತ್ತು ಡ್ರೋನ್ ಗುಂಡಿನ ದಾಳಿ ನಡೆಸಿದೆ. ಗಡಿಯನ್ನು ಸ್ಥಿರಗೊಳಿಸಲು ಮತ್ತು ವಿಶಾಲ ಭದ್ರತಾ

ಮಾತುಕತೆಗಳನ್ನು ಸಕ್ರಿಯಗೊಳಿಸಲು ಉದ್ದೇಶಿಸಿರುವ ಅಮೆರಿಕ ಮಧ್ಯಸ್ಥಿಕೆಯ ಕದನ ವಿರಾಮವನ್ನು ಉಲ್ಲಂಘಿಸಲಾಗಿದೆ ಎಂದು ಇಸ್ರೇಲ್ ಮತ್ತು ಲೆಬನಾನ್ ಪರಸ್ಪರ ಆರೋಪಿಸಿವೆ.

<>><><*><><<>

ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ-ಬಿಸಿಸಿಐ ಇಂದು ಐಸಿಸಿ ಮಹಿಳಾ ಟಿ-೨೦ ವಿಶ್ವಕಪ್ ೨೦೨೬ ಕ್ಕೆ ಭಾರತೀಯ ತಂಡವನ್ನು ಪ್ರಕಟಿಸಿದೆ. ಹರ್ಮನ್ ಪ್ರೀತ್ ಕೌರ್ ತಂಡವನ್ನು ಮುನ್ನಡೆಸಲಿದ್ದು, ಸ್ಮೃತಿ ಮಂಧಾನ ಉಪನಾಯಕಿಯಾಗಿ ಆಯ್ಕೆಯಾಗಿದ್ದಾರೆ. ಜೂನ್ ೧೨ ರಿಂದ ಆರಂಭವಾಗುವ ಈ ಪಂದ್ಯಾವಳಿಯನ್ನು ಇಂಗ್ಲೆಂಡ್ ಆಯೋಜಿಸಲಿದ್ದು, ಜುಲೈ ೫ ರಂದು ಲಾರ್ಡ್ಸ್ ಕ್ರಿಕೆಟ್ ಮೈದಾನದಲ್ಲಿ ಫೈನಲ್ ಪಂದ್ಯ ನಡೆಯಲಿದೆ. ಭಾರತದ ೧೫ ವನಿತೆಯರ ತಂಡದಲ್ಲಿ ಶಫಾಲಿ ವರ್ಮಾ, ಜೆಮಿಮಾ ರೋಡ್ರಿಗಸ್, ಭಾರ್ತಿ ಫುಲ್ಮಾಲಿ ಮತ್ತು ರಿಚಾ ಘೋಷ್ ಸೇರಿದಂತೆ ಉತ್ತಮ ಬ್ಯಾಟಿಂಗ್ ಪಟುಗಳಿದ್ದಾರೆ. ಜೂನ್ ೧೪ ರಂದು ಎಡ್ಜ್‌ಬಾಸ್ಟನ್‌ನಲ್ಲಿ ಪಾಕಿಸ್ತಾನ ವಿರುದ್ಧ ಭಾರತ ತಂಡ ತಮ್ಮ ಅಭಿಯಾನ ಆರಂಭಿಸಲಿದೆ. ನಂತರ ಜೂನ್ ೧೭ ರಂದು ನೆದರ್ಲ್ಯಾಂಡ್ಸ್, ಜೂನ್ ೨೧ ರಂದು ದಕ್ಷಿಣ ಆಫ್ರಿಕಾ, ಜೂನ್ ೨೫ ರಂದು ಬಾಂಗ್ಲಾದೇಶ ಮತ್ತು ಜೂನ್ ೧೮ ರಂದು ಆಸ್ಟ್ರೇಲಿಯಾ ವಿರುದ್ಧದ ಪಂದ್ಯಗಳನ್ನು ಆಡಲಿದೆ.

<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>

<>><><ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ ><><<>